ಕರ್ನಾಟಕ ಸರ್ಕಾರ
ಮಕ್ಕಳ ರಕ್ಷಣಾ ನಿರ್ದೇಶನಾಲಯ
C/o ನಿರ್ದೇಶನಾಲಯ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಒಂದನೇ ಮಹಡಿ, ಬಹು ಮಹಡಿಗಳ ಕಟ್ಟಡ,
ಡಾ॥ಬಿ.ಆರ್. ಅಂಬೇಡ್ಕರ್ ವೀದಿ, ಬೆಂಗಳೂರು-560 001, ಕರ್ನಾಟಕ
**E-mail ID:icps.kar@gmail.com** **Phone No: 080-22879381**

ಸಂಖ್ಯೆ:ಕರಾಸಮರಸೊ/ತರಬೇತಿ/LST/21/2019-20 ದಿನಾಂಕ: 06-01-2021

**ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು,**
**ಜಿಲ್ಲಾ ಮಕ್ಕಳ ರಕ್ಷಣಾ ಘಟಕ,**
**30 ಜಿಲ್ಲೆಗಳಿಗೆ**

ಮಾನ್ಯರೇ,

**ವಿಷಯ:-** ಮಕ್ಕಳ ಪಾಲನಾ ಸಂಸ್ಥೆಗಳಲ್ಲಿನ ಮಕ್ಕಳಿಗೆ ಕೌಶಲ್ಯ ಅಭಿವೃದ್ಧಿ ತರಬೇತಿ ಏರ್ಪಡಿಸುವುದರ ಕುರಿತು.
**ಉಲ್ಲೇಖ:-**1.ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ತುಮಕೂರು ಜಿಲ್ಲೆಯವರ ಪತ್ರ ಸಂ.ಜಿಮರಘ:ತು:ಕೌಶಲ್ಯಾಭಿವೃದ್ಧಿ.ಕಾ:2020-21/181, ದಿನಾಂಕ:-02-01-2021.
2.ಸಂ.ಕರಾಸಮರಸೊ/ತರಬೇತಿ/LST/21/2019-20, ದಿನಾಂಕ:-10-11-2020
3.ಸಂ. ಕರಾಸಮರಸೊ/ತರಬೇತಿ/LST/21/2019-20, ದಿನಾಂಕ:-08-12-2020

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1)ರ ಪತ್ರದನ್ವಯ ಸರ್ಕಾರಿ ಮಕ್ಕಳ ಪಾಲನಾ ಸಂಸ್ಥೆಗಳಲ್ಲಿನ 14 ರಿಂದ 18 ವರ್ಷದ ಮಕ್ಕಳಿಗೆ ಅವರಿಗೆ ಆಸಕ್ತಿ ಇರುವ ವಿಷಯಗಳಲ್ಲಿ ಕೌಶಲ್ಯಭಿವೃದ್ಧಿ ತರಬೇತಿಯನ್ನು ಕೌಶಲ್ಯ ಅಭಿವೃದ್ಧಿ ಇಲಾಖೆಯಿಂದ ಮಾನ್ಯತೆ ಪಡೆದ ತರಬೇತಿ ಕೇಂದ್ರಗಳ ಮುಖಾಂತರ ಹಮ್ಮಿಕೊಳ್ಳಲು ಪ್ರಸ್ತುತದ ಸಂದರ್ಭದಲ್ಲಿ ಹಲವಾರು ಕಾರಣಗಳಿಂದ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲು ಸಾಧ್ಯವಾಗುತ್ತಿರುವುದಿಲ್ಲದೆಂದು ತಿಳಿಸಿರುತ್ತಾರೆ.

**ಆದ್ದರಿಂದ ಈ ಕೆಳಂಡಂತೆ ಕೆಲವು ಮಾರ್ಪಾಡುಗಳನ್ನು ಮಾಡಿಕೊಳ್ಳಬಹುದು:-**

- ಜಿಲ್ಲೆಗಳಲ್ಲಿ ಸರ್ಕಾರದ ಮಕ್ಕಳ ಪಾಲನಾ ಸಂಸ್ಥೆಗಳಲ್ಲಿ ಪ್ರಸ್ತುತ 14 ರಿಂದ 18 ವರ್ಷದೊಳಗಿನ ಮಕ್ಕಳು ಅವಶ್ಯವಿದ್ದಷ್ಟು ಸಂಖ್ಯೆಯಲ್ಲಿ ಇಲ್ಲದಿದ್ದರೆ ಬಾಲನ್ಯಾಯ ಕಾಯ್ದೆ, 2015 ಅಡಿ ನೋಂದಾಯಿಸಲ್ಪಟ್ಟ ಸರ್ಕಾರೇತರ ಮಕ್ಕಳ ಪಾಲನಾ ಸಂಸ್ಥೆಗಳಲ್ಲಿ ಮಕ್ಕಳ ಕಲ್ಯಾಣ ಸಮಿತಿ ಮುಖಾಂತರ ದಾಖಲಾಗಿರುವ ಮಕ್ಕಳಿಗೆ ಬಿಡುಗಡೆಯಾದ ಅನುದಾನವನ್ನು ಬಳಸಿಕೊಂಡು ತರಬೇತಿಯನ್ನು ಆಯೋಜಿಸುವುದು. ಉಲ್ಲೇಖ(2)ರ ಆದೇಶದಲ್ಲಿ ತಿಳಿಸಿರುವಂತೆ ಸೂಕ್ತ ಕ್ರಮವಹಿಸಿ ಅನುಪಾಲನಾ ವರದಿಯನ್ನು ಸಲ್ಲಿಸುವುದು.
- ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯಿಂದ ಮಾನ್ಯತೆ ಪಡೆದಿರುವ ತರಬೇತಿಯ ಸಂಸ್ಥೆಗಳ ವಿವರವನ್ನು ಉಲ್ಲೇಖ (3)ರಲ್ಲಿ ಈಗಾಗಲೇ ಜಿಲ್ಲೆಗೆ ಒದಗಿಸಲಾಗಿರುತ್ತದೆ. ಇದರ ಜೊತೆಗೆ ಜಿಲ್ಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಜನ ಶಿಕ್ಷಣ ಸಂಸ್ಥೆ, ರುಡ್‌ಸೆಟ್, ಕರ್ನಾಟಕ ರಾಜ್ಯ ನಿರ್ಮಾಣ ಕೇಂದ್ರ (ಕಾರ್ನಿಕ್) ಸಂಸ್ಥೆ, ಕೃಷಿ ವಿಜ್ಞಾನ ಕೇಂದ್ರಗಳು, ಗಾಮೀಣ ಸ್ವಯಂ ಉದ್ಯೋಗ ತರಬೇತಿ ಕೇಂದ್ರಗಳು ಹಾಗೂ ಕೇಂದ್ರ ಮತ್ತು ರಾಜ್ಯ ಸರ್ಕಾರದಿಂದ ಮಾನ್ಯತೆ ಪಡೆದ ಇನ್ನೂ ಇತರೇ ಸಂಸ್ಥೆಗಳ ಜೊತೆಗೆ ಒಪ್ಪಂದ ಮಾಡಿಕೊಂಡು ತರಬೇತಿಯನ್ನು ಆಯೋಜಿಸಲು ತಿಳಿಸಿದೆ.
- ಬಾಲನ್ಯಾಯ ಕಾಯ್ದೆ, 2015 ಅಡಿ ನೋಂದಾಯಿಸಲ್ಪಟ್ಟ ಸರ್ಕಾರದ ಮತ್ತು ಸರ್ಕಾರೇತರ ಮಕ್ಕಳ ಪಾಲನಾ ಸಂಸ್ಥೆಗಳಲ್ಲಿ ದಾಖಲಾಗಿರುವ ಎಲ್ಲಾ ಮಕ್ಕಳಿಗೆ Visual Holland Code Test ಪರೀಕ್ಷೆಯನ್ನು ನೀಡಿ ಮಕ್ಕಳು ಯಾವ ಕ್ಷೇತ್ರದಲ್ಲಿ ಕೌಶಲ್ಯವನ್ನು ಗುರುತಿಸಿಕೊಂಡಿರುತ್ತಾರೆಂಬ ಮಾಹಿತಿಯನ್ನು ಈಗಾಗಲೇ ನೀಡಿರುವ ನಮೂನೆಯಲ್ಲಿ ಮಾಹಿತಿಯನ್ನು ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು ದೃಢೀಕರಿಸಿ ಮಕ್ಕಳ ರಕ್ಷಣಾ ನಿರ್ದೇಶನಾಲಯಕ್ಕೆ ಸಲ್ಲಿಸುವುದು.
- Visual Holland Code Test ನ ಪರೀಕ್ಷೆಯಲ್ಲಿ ನೀಡಿರುವ ಕ್ಷೇತ್ರ ಹೊರತು ಪಡಿಸಿ ಮಕ್ಕಳು ಇತರೇ ಕ್ಷೇತ್ರಗಳಲ್ಲಿ ಗುರುತಿಸಿದ್ದರೆ ಆ ಕ್ಷೇತ್ರದ ವಿಷಯಕ್ಕೆ ಸಂಬಂಧಿಸಿದ ಕೌಶಲ್ಯದ ಬಗ್ಗೆ ತರಬೇತಿಯನ್ನು ಆಯೋಜಿಸಬಹುದು ಹಾಗೂ ಮಕ್ಕಳು



P.T.O.

Visual Holland Code Test ಪರೀಕ್ಷೆಯಲ್ಲಿ ಆಯ್ಕೆ ಮಾಡಿದ ಕೌಶಲ್ಯ/ಕ್ಷೇತ್ರಗಳಲ್ಲಿ ತರಬೇತಿಯು ಜಿಲ್ಲೆಯಲ್ಲಿ ಲಭ್ಯವಿಲ್ಲದಿದ್ದರೆ ಹಾಗೂ ಜಿಲ್ಲೆಯಲ್ಲಿ ಲಭ್ಯವಿರುವ ಯಾವುದೇ ಕೌಶಲ್ಯ/ಕ್ಷೇತ್ರಕ್ಕೆ ಸಂಬಂಧಿಸಿದಂತೆ ತರಬೇತಿಗೆ ಹಾಜರಾಗಲು ಮಕ್ಕಳು ಆಸಕ್ತಿ ಇದ್ದರೆ ಮಕ್ಕಳಿಗೆ ಅಂತಹ ತರಬೇತಿಯನ್ನು ನೀಡಬಹುದು.

- ಮಕ್ಕಳಿಗೆ ನೀಡುವ ಕೌಶಲ್ಯ ಅಭಿವೃದ್ಧಿ ತರಬೇತಿಗೆ ಸಂಬಂಧಿಸಿದಂತೆ ಹೆಚ್ಚಿನ ಅನುದಾನ ಅವಶ್ಯಕತೆ ಇದ್ದಲ್ಲಿ ಪ್ರಸ್ತಾವನೆಯನ್ನು ಪ್ರಧಾನ ಕಛೇರಿಗೆ ಸಲ್ಲಿಸುವುದು.

- ಶಾಲೆಗಳು ಪ್ರಾರಂಭವಾಗಿರುವ ಹಿನ್ನಲೆಯಲ್ಲಿ 06 ರಿಂದ 10 ನೇ ತರಗತಿ ಮಕ್ಕಳಿಗೆ ಬೇರೆ ಬೇರೆ ಸಮಯದಲ್ಲಿ ತರಗತಿಗಳು ನಡೆಯುತ್ತಿರುವುದು ಗಮನಿಸಿದ್ದು, ಮಕ್ಕಳು ಶಾಲಾ ತರಗತಿಗಳ ಸಮಯ ಹಾಗೂ ತರಬೇತಿ ಕೇಂದ್ರಗಳ ಸಮಯವನ್ನು ತಾಳೆ ಮಾಡಿಕೊಂಡು ಮಕ್ಕಳಿಗೆ ತರಬೇತಿಯನ್ನು ಆಯೋಜಿಸುವುದು ಹಾಗೂ ವಾರ್ಷಿಕ ಪರೀಕ್ಷೆ ನಂತರ ರಜೆ ಸಮಯದಲ್ಲಿ ಮಕ್ಕಳಿಗೆ ಕೌಶಲ್ಯ ತರಬೇತಿಯನ್ನು ಆಯೋಜಿಸುವುದು ಸದರಿ ತರಬೇತಿಗೆ ತಗಲುವ ವೆಚ್ಚವನ್ನು ಬಿಡುಗಡೆ ಮಾಡಿರುವ ಅನುದಾನದಲ್ಲಿ ಭರಿಸತಕ್ಕದ್ದು.

ತಮ್ಮ ಜಿಲ್ಲೆಗಳಿಗೆ ಅನುಗುಣವಾಗುವಂತೆ ಮೇಲ್ಕಂಡ ಕೆಲವು ಮಾರ್ಪಾಡುಗಳನ್ನು ಮಾಡಿಕೊಂಡು ಮಕ್ಕಳಿಗೆ ಕೌಶಲ್ಯ ಅಭಿವೃದ್ಧಿ ತರಬೇತಿಗೆ ಸಂಬಂಧಿಸಿದಂತೆ ತರಬೇತಿಯನ್ನು ಆಯೋಜಿಸಲು ಸೂಕ್ತ ಕ್ರಮವಹಿಸಿ ದಿನಾಂಕ:20–01–2021 ಒಳಗೆ ಕೌಶಲ್ಯಾಭಿವೃದ್ಧಿಗಾಗಿ ಈಗಾಗಲೇ ಬಿಡುಗಡೆಯಾದ ಅನುದಾನಕ್ಕೆ ಉಪಯುಕ್ತತಾ ಪ್ರಮಾಣ ಪತ್ರವನ್ನು ತಪ್ಪದೇ ಸಲ್ಲಿಸಲು ತಿಳಿಸಿದೆ.

ತಮ್ಮ ವಿಶ್ವಾಸಿ,
06.01.2021
ನಿರ್ದೇಶಕರು,
ಮಕ್ಕಳ ರಕ್ಷಣಾ ನಿರ್ದೇಶನಾಲಯ,
ಬೆಂಗಳೂರು.